

ನಾಳೆಯ ಭರವಸೆ: ಕ್ಯಾಂಡಿಡೇಟ್ಸ್ ಟೂರ್ನಿಯ ಮೊದಲ ಭಾಗದಲ್ಲಿ ಸತತ ಸೋಲುಗಳಿಂದ ಕಂಗೆಟ್ಟರೂ, ಎರಡನೇ ಭಾಗದಲ್ಲಿ ಐದು ಗೆಲುವುಗಳನ್ನು ಸಾಧಿಸುವ ಚೆಸ್‌ಪ್ರಿಯರ ಗಮನಸೆಳೆದ ಆರ್. ವೈಶಾಲಿ

## ಛಲಗಾತಿ ವೈಶಾಲಿ

ಕ್ಯಾಂಡಿಡೇಟ್ಸ್ ಟೂರ್ನಿಯ ಮಹಿಳಾ ವಿಭಾಗದಲ್ಲಿ ಆರ್. ವೈಶಾಲಿ ಅವರ ಸಾಧನೆ ನಿಬ್ಬೆರಗಾಗಿಸುವಂತಹದ್ದು. ಆರಂಭಿಕ ಸೋಲುಗಳಿಂದ ಜರ್ಜರಿತರಾಗಿದ್ದ ವೈಶಾಲಿ, ಎರಡನೇ ಸುತ್ತಿನಲ್ಲಿ ಪುಟಿದೆದ್ದದ್ದು ಫೀನಿಕ್ಸ್ ಪುನರುತ್ಥಾನದ ಕಥನ ನೆನಪಿಸುವಂತಹದ್ದು.

ಟೂರ್ನಿಯ ಮೊದಲ ಭಾಗ ಕೊನೆಗೊಂಡಾಗ ವೈಶಾಲಿ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದ್ದರು. ಎರಡನೇ ಭಾಗದಲ್ಲಿ ಗೆಲುವಿನ ಮೇಲೆ ಗೆಲುವು ಸಾಧಿಸುತ್ತ ಕೊನೆಗೆ 6 ಅಂಕಗಳ ಸಂಪಾದನೆಯೊಂದಿಗೆ ನಾಲ್ಕನೇ ಸ್ಥಾನಕ್ಕೆ ಬಂದು ನಿಂತರು. ಮೊದಲ ಸುತ್ತುಗಳಲ್ಲಿ ತಮ್ಮನ್ನು ಯಾರೆಲ್ಲ ಸೋಲಿಸಿದ್ದರೋ, ಎರಡನೇ ಸುತ್ತಿನಲ್ಲಿ ಅವರ ವಿರುದ್ಧ ಮುಯ್ಯಿ ತೀರಿಸಿಕೊಂಡರು.

ಪುರುಷರ ವಿಭಾಗದಲ್ಲಿದ್ದ ಸಹೋದರ ಪ್ರಜ್ಞಾನಂದನಿಗಿಂತಲೂ ಉತ್ತಮ ಸಾಧನೆ ವೈಶಾಲಿ ಅವರದು. ಅಷ್ಟು ಮಾತ್ರವಲ್ಲ, ಈ ಬಾರಿಯ ಕ್ಯಾಂಡಿಡೇಟ್ಸ್ ಟೂರ್ನಿಯ ಪುರುಷರು ಹಾಗೂ ಮಹಿಳೆಯರು – ಎರಡೂ ವಿಭಾಗಗಳಲ್ಲಿ ಅತ್ಯಂತ ಹೆಚ್ಚು ಗೆಲುವುಗಳನ್ನು (6 ಗೆಲುವು) ಸಾಧಿಸಿದ ಸಾಧನೆಯೂ ಚೆನ್ನೈನ ಈ ಆಟಗಾರ್ತಿಯದೇ. ವೈಶಾಲಿಯ ಈ ಸಾಧನೆ ಮುಂದಿನ ದಿನಗಳಲ್ಲಿ ಭಾರತದ ಮಹಿಳಾ ವಿಭಾಗದಲ್ಲಿ ಭರವಸೆಯನ್ನು ಹುಟ್ಟುಹಾಕಿದೆ.

## ಹೊಸ ಚಾಂಪಿಯನ್ ನಿರೀಕ್ಷೆಯಲ್ಲಿ...

ಈ ವರ್ಷಾಂತ್ಯ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಗುಕೇಶ್ ಅವರು ಹಾಲಿ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ ವಿರುದ್ಧ ಆಡಬೇಕಿದೆ. ಭಾರತೀಯ ಆಟಗಾರನಿಗೆ ಚಾಂಪಿಯನ್ ಆಗುವ ಅವಕಾಶ ಉಜ್ವಲವಾಗಿದೆ ಎನ್ನುವ ಮಾತುಗಳು ಕೇಳಿಬರುತ್ತಿವೆ. ಇತ್ತೀಚಿನ ಆರು ತಿಂಗಳಲ್ಲಿ ಆಡಿರುವ ಟೂರ್ನಿಗಳಲ್ಲಿ, 31 ವರ್ಷದ ಲಿರೆನ್ ಅವರ ಪ್ರದರ್ಶನ ಅಷ್ಟು ಗಮನಾರ್ಹವಾಗಿಲ್ಲ ಎನ್ನುವುದು ಈ ವಿಶ್ಲೇಷಣೆಗೆ ಕಾರಣ.

‘ವಯಸ್ಸಿಗೆ ಮೀರಿದ ಪ್ರಬುದ್ಧತೆ, ಆಟವನ್ನು ತನ್ನದೇ ರೀತಿಯಲ್ಲಿ ಅರ್ಥೈಸಿಕೊಳ್ಳುವ ಕಲೆಗಾರಿಕೆ ಅವರಿಗೆ ಇದೆ. ಎದುರಿಸಲು ಕಠಿಣ ಎದುರಾಳಿ ದೊರಕಿದ್ದಾರೆ...’ – ಇದು ಗುಕೇಶ್ ಅವರು ಕ್ಯಾಂಡಿಡೇಟ್ಸ್‌ನಲ್ಲಿ ಯಶಸ್ಸು ಗಳಿಸಿದ ನಂತರ ಲಿರೆನ್ ನೀಡಿದ ಪ್ರತಿಕ್ರಿಯೆ. ಈ ಮೆಚ್ಚುಗೆಯ ಜೊತೆಗೇ, ಕ್ಲಾಸಿಕಲ್ ಚೆಸ್ ತಮಗೆ ಅನುಕೂಲಕರ ಎನ್ನುವ ಮಾತನ್ನೂ ಆಡಿರುವುದು ಗಮನಾರ್ಹ.

## ಅವಕಾಶದ ಬಾಗಿಲು

ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಗುಕೇಶ್ ಸ್ಥಾನ ಪಡೆಯಲು ಸುದೀರ್ಘ ಹೋರಾಟವನ್ನೇ ನಡೆಸಬೇಕಾಯಿತು. ವಿಶ್ವಕಪ್ ಟೂರ್ನಿಯ ಮೂಲಕ ಪ್ರಜ್ಞಾನಂದ ಕ್ಯಾಂಡಿಟೇಟ್ಸ್‌ಗೆ ಪ್ರವೇಶ ಗಿಟ್ಟಿಸಿಕೊಂಡಿದ್ದ. ಅಲ್ಲಿ ಕೈಗೂಡದ ಗುಕೇಶ್ ಕನಸು ನನಸಾದುದು, ಕಳೆದ ವರ್ಷದ ಡಿಸೆಂಬರ್‌ನಲ್ಲಿ ನಡೆದ ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಟೂರ್ನಿಯಲ್ಲಿ. ಚೆನ್ನೈ ಪಂದ್ಯಾವಳಿಯಲ್ಲಿ ಅವರು ಚಾಂಪಿಯನ್ ಆಗಿದ್ದು ಕ್ಯಾಂಡಿಡೇಟ್ಸ್ ಟೂರ್ನಿಗೆ ಅವಕಾಶದ ಬಾಗಿಲನ್ನು ತೆರೆಯಿತು.

ವೇಗವಾಗಿ ಆಡುವ ಸಾಮರ್ಥ್ಯ, ಪಂದ್ಯವನ್ನು ‘ಓದುವ’ ಗುಣ ಅವರಿಗೆ ನೆರವಾದವು ಎನ್ನಲಾಗುತ್ತಿದೆ.

ಇರಾನ್ ಸಂಜಾತ, ಫ್ರಾನ್ಸ್‌ನ ಅಲಿರೇಝಾ ಅವರು ಈ ಟೂರ್ನಿಯಲ್ಲಿ ಅಂಥ ಲಯದಲ್ಲೇನೂ ಇರಲಿಲ್ಲ. ಪ್ಯಾರಿಸ್‌ನಲ್ಲಿ ನೆಲೆಸಿರುವ ಅವರು ಚೆಸ್‌ನಷ್ಟೇ ಆಸಕ್ತಿಯನ್ನು ಫ್ಯಾಷನ್ ಲೋಕದತ್ತಲೂ ತೋರುತ್ತಿದ್ದಾರೆ. ಅವರಿಗೆ ಟೊರಾಂಟೊ ಟೂರ್ನಿಯಲ್ಲಿ ಏಳನೇ ಸ್ಥಾನ ದೊರೆಯಿತಷ್ಟೇ. ಆದರೆ ಏಳನೇ ಸುತ್ತಿನಲ್ಲಿ ಅವರು ಗುಕೇಶ್ ಅವರಿಗೆ ಮೊದಲ ಸೋಲು ಕಾಣಿಸಿದ್ದರು. ಹಾಗೆ ನೋಡಿದರೆ ಆ ಪಂದ್ಯದಲ್ಲಿ ಗುಕೇಶ್ ಅವರಿಗೆ ಒಮ್ಮೆ ಗೆಲುವಿನ ಅವಕಾಶ ಇತ್ತು. ಸಮಯದ ಒತ್ತಡಕ್ಕೆ ಸಿಲುಕಿ, ಆ ಅವಕಾಶ ಕೈತಪ್ಪಿ ಅಲಿರೇಝಾ ಮೇಲುಗೈ ಸಾಧಿಸಿದರು. ಆ ಸೋಲಿನಿಂದ ಗುಕೇಶ್ ಕುಗ್ಗಲಿಲ್ಲ.

ಆ ಪಂದ್ಯ ಮುಗಿದ ಮರುದಿನ ವಿಶ್ರಾಂತಿ ದಿನವಾಗಿತ್ತು. ಬಿಡುವಿನ ಸಮಯ ಆತ್ಮವಿಮರ್ಶೆಗೆ ಅವಕಾಶ ಕಲ್ಪಿಸಿತು. ತಾನು ಇನ್ನೂ ಚೆನ್ನಾಗಿ ಆಡಬಲ್ಲೆ ಎಂಬ ಮನಃಸ್ಥಿತಿ, ವಿಶ್ವಾಸವನ್ನು ಅವರು ತಮ್ಮಷ್ಟಕ್ಕೆ ಮೂಡಿಸಿಕೊಂಡರು. ‘ಮೊದಲರ್ಧದ ಆಟವಷ್ಟೇ ಮುಗಿದಿದೆ; ಇನ್ನೂ ಏಳು ಸುತ್ತುಗಳಿವೆ’ ಎಂದು ತಾಯಿ ಪದ್ಮಾ ಕುಮಾರಿ ಪ್ರೇರಣೆಯ ಮಾತುಗಳನ್ನು ಆಡಿದರು. ಟೂರ್ನಿಯ ಉತ್ತರಾರ್ಧದಲ್ಲಿ ಗುಕೇಶ್ ಪುಟಿದೆದ್ದರು. ಅವರು ಟೂರ್ನಿಯಲ್ಲಿ ಅನುಭವಿಸಿದ್ದು ಅದೊಂದೇ ಸೋಲು. ಆ ಸೋಲನ್ನೂ ಅವರು ನಂತರದ ಗೆಲುವುಗಳಿಗೆ ಮೆಟ್ಟಿಲುಗಳಾಗಿಸಿಕೊಂಡರು. 13ನೇ ಸುತ್ತಿನಲ್ಲಿ ಅಲಿರೇಝಾ ಮೇಲೆಯೇ ಗೆದ್ದು ಅವರು ಮೊದಲ ಸಲ ಏಕಾಂಗಿಯಾಗಿ ಅಗ್ರಸ್ಥಾನ ಪಡೆದಿದ್ದರು.

ಕೊನೆಯ ಸುತ್ತಿನಲ್ಲಿ ನಕಾಮುರಾ ಜೊತೆ ಡ್ರಾ ಮಾಡಿಕೊಂಡ ನಂತರವೂ ಗುಕೇಶ್‌ಗೆ ಚಾಂಪಿಯನ್ ಪಟ್ಟ ಖಚಿತವಾಗಿರಲಿಲ್ಲ. ಕರುವಾನಾ ಅವರು ನೆಪೊಮ್‌ನಿಷಿ ಜೊತೆ ಗೆದ್ದರೆ ಟೈಬ್ರೇಕ್ ಪಂದ್ಯಗಳನ್ನು ಆಡಬೇಕಿತ್ತು. ಆದರೆ, ಆ ಪಂದ್ಯದಲ್ಲಿ ಕರುವಾನಾ ಗೆಲುವಿನ ಅವಕಾಶಗಳಲ್ಲಿ ಎಡವಿದ್ದೂ, ಗುಕೇಶ್‌ಗೆ ನೆರವಾಯಿತು. ಕೊನೆಯ ಸುತ್ತು ಇರುವಾಗ ನಾಲ್ಕು ಮಂದಿಗೆ ಪ್ರಶಸ್ತಿ ಗೆಲ್ಲುವ ಅವಕಾಶ ಇದ್ದಿದ್ದು ಈ ಟೂರ್ನಿಯಲ್ಲಿ ಪೈಪೋಟಿ ಯಾವ ಮಟ್ಟದಲ್ಲಿತ್ತು ಎನ್ನುವುದನ್ನು ಸೂಚಿಸುವಂತಿತ್ತು.

